# ಟಿಬಿಯ ಬಗ್ಗೆ ಮಾಹಿತಿ

- ಟಿಬಿ ಒಂದು ಸಾಂಕ್ರಾಮಿಕ ಖಾಯಿಲೆ. 'ಮೈಕೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲೋಸಿಸ್' ಬ್ಯಾಸಿಲೈಗಳಿಂದ ಹರಡುತ್ತದೆ.
- ಟಿಬಿ ಒಬ್ಬರಿಂದ ಇನ್ನೊಬ್ಬರಿಗೆ ಕೆಮ್ಮುವುದರ ಮೂಲಕ ಗಾಳಿಯಿಂದ ಹರಡುತ್ತದೆ.
- ಸರಿಯಾದ ಔಷಧಿಯನ್ನು, ಸರಿಯಾದ ಪ್ರಮಾಣದಲ್ಲಿ ಸೂಕ್ತ ಕಾಲಾವಧಿಯವರೆಗೆ ತೆಗೆದುಕೊಂಡಲ್ಲಿ ಸಂಪೂರ್ಣವಾಗಿ ಟಿಬಿಯನ್ನು ಗುಣಪಡಿಸಬಹುದು.



## ಟಿಬಿಯ ಸಾಮಾನ್ಯ ಲಕ್ಷಣಗಳು

- ನಿರಂತರವಾಗಿರುವ, ತುಂಬ ದಿನಗಳಾದರೂ ವಾಸಿಯಾಗದ ಕೆಮ್ಮು ಟಿಬಿಯ ಅತಿ ಸಾಮಾನ್ಯ ಲಕ್ಷಣ.



ತೂಕ ಇಳಿಕೆ



ಎದೆ ನೋವು



ಸುಸ್ತು



ರಾತ್ರಿ ಬೆವರು



ಕಫದಲ್ಲಿ ರಕ್ತ



ಹಸಿವಾಗದಿರುವುದು



ಜ್ವರ



ಕಫ ಜೊತೆ ನಿರಂತರ ಕೆಮ್ಮು



# ಶ್ವಾಸಕೋಶದ ಟಿಬಿಯನ್ನು ಪತ್ತೆ ಮಾಡುವಿಕೆ (ಡಯಾಗ್ನೋಸಿಸ್)




- ಶ್ವಾಸಕೋಶದ ಟಿಬಿ ರೋಗದ ಪತ್ತೆಗೆ ಕಫ ಪರೀಕ್ಷೆ ಅಗತ್ಯ.
- ಎರಡು ಕಫದ ಮಾದರಿಗಳು ಅತ್ಯಗತ್ಯ.

# EPTB /ಇಪಿಟಿಬಿ ಎಕ್ಸ್ಟ್ರಾಪಲ್ಮನರಿ

- ದೇಹದ ಇತರ ಭಾಗವನ್ನು ಬಾಧಿಸಿದಾಗ ಕ್ಷಯರೋಗವನ್ನು ಎಕ್ಸ್ಟ್ರಾಪಲ್ಮನರಿ ಟಿಬಿ/ಪುಪ್ಪುಸದ (ಶ್ವಾಸಕೋಶ್ವದ) ಹೊರಗಿನ ಕ್ಷಯ (EPTB /ಇಪಿಟಿಬಿ) ಎನ್ನುತ್ತಾರೆ.
- ಅದು ಕೂದಲು ಮತ್ತು ಉಗುರುಗಳ ಹೊರತಾಗಿ ದೇಹದ ಯಾವುದೇ ಭಾಗವನ್ನು ಬಾಧಿಸಬಹುದು.




ಸಾಮಾನ್ಯವಾಗಿ ಟಿಬಿ ಶ್ವಾಸಕೋಶವನ್ನು ಬಾಧಿಸುತ್ತದೆ.
ಟಿಬಿ ಉಗುರು ಮತ್ತು ಕೂದಲನ್ನು ಬಿಟ್ಟರೇ ದೇಹದ ಯಾವುದೇ ಭಾಗವನ್ನುಬಾಧಿಸಬಹುದು.

# ಟಿಬಿ ಚಿಕಿತ್ಸೆಯ ಬಗ್ಗೆ

- ವೈದ್ಯರು ಹೇಳಿದಂತೆ ದಿನವೂ ಔಷಧಿ ತೆಗೆದುಕೊಳ್ಳಬೇಕು.
- ಸರಿಯಾದ ಔಷಧಿಗಳನ್ನು ಸರಿಯಾದ ಪ್ರಮಾಣದಲ್ಲಿ ಸೂಕ್ತ ಅವಧಿಗೆ ತೆಗೆದುಕೊಂಡಲ್ಲಿ ಟಿಬಿಯನ್ನು ಗುಣಪಡಿಸಬಹುದು.
- ಚಿಕಿತ್ಸೆಯ ಅವಧಿ ಕನಿಷ್ಠ 6 ತಿಂಗಳು.



## ಔಷಧಿಗಳನ್ನು ನುಂಗುವುದು ಹೇಗೆ

- ಎಲ್ಲಾ ಟಿಬಿ ಔಷಧಿಗಳನ್ನು ಪ್ರತಿದಿನ ಒಂದೇ ಕಾಲಕ್ಕೆ ಒಟ್ಟಿಗೆ ತೆಗೆದುಕೊಳ್ಳಬೇಕು.
- ಔಷಧಿ ತೆಗೆದುಕೊಳ್ಳುವುದು ಕಷ್ಟವಾದಲ್ಲಿ, ಸ್ವಲ್ಪ ಆಹಾರ ತೆಗೆದುಕೊಂಡ ನಂತರ ಅಥವಾ ಆಹಾರದ ಜೊತೆ ಔಷಧಿಗಳನ್ನು ತೆಗೆದುಕೊಳ್ಳಬಹುದು.
- ಅಗತ್ಯವಿದ್ದಲ್ಲಿ, ಮಾತ್ರೆ ತೆಗೆದುಕೊಂಡ ನಂತರ, ವಿಶ್ರಾಂತಿ ತೆಗೆದುಕೊಳ್ಳಬಹುದು.



## ಟಿಬಿ ಚಿಕಿತ್ಸೆಯಿಂದಾಗುವ ಪರಿಣಾಮಗಳು

- ಟಿಬಿ ಔಷಧಿಗಳು ಟಿಬಿ ಬ್ಯಾಸಿಲೈಗಳನ್ನು ಕೊಲ್ಲುತ್ತವೆ. ಅಥವಾ ಬೆಳೆಯಲು ಬಿಡುವುದಿಲ್ಲ.
- ಚಿಕಿತ್ಸೆಯಿಂದಾಗಿ ಟಿಬಿ ಇರುವ ವ್ಯಕ್ತಿ ಉತ್ತಮಗೊಳ್ಳುತ್ತಾನೆ, ದೇಹಸ್ಥಿತಿ ಸುಧಾರಿಸುತ್ತದೆ. ತೂಕ ಹೆಚ್ಚುತ್ತದೆ. ಕೆಲಸ ಮಾಡಲು ಸಾಧ್ಯವಾಗುತ್ತದೆ.
- ಕುಟುಂಬದಲ್ಲಿನ ಮಕ್ಕಳು ಮತ್ತಿತರರಿಗೆ ಹಾಗೂ ಸುತ್ತಮುತ್ತಲಿನವರಿಗೆ ಹರಡುವುದು ನಿಲ್ಲುತ್ತದೆ.



## ಟಿಬಿ ಚಿಕಿತ್ಸೆ ಮಾಡದಿದ್ದಲ್ಲಿ ಆಗುವ ಪರಿಣಾಮಗಳು

**ಟಿಬಿ ಇರುವ ವ್ಯಕ್ತಿಗೆ ಬೇಗ ಚಿಕಿತ್ಸೆಯಾಗದಿದ್ದಲ್ಲಿ:**

- ಟಿಬಿ ಲಕ್ಷಣಗಳು ಮತ್ತಷ್ಟು ಹದಗೆಡುತ್ತವೆ, ಚಿಕಿತ್ಸೆ ಮತ್ತಷ್ಟು ಕಠಿಣವಾಗುತ್ತದೆ.
- ಕೆಲಸಕ್ಕೆ ಹೋಗುವುದು ಕಷ್ಟವಾಗುತ್ತದೆ.
- ಶ್ವಾಸಕೋಶದ ಟಿಬಿ ಒಬ್ಬರಿಂದೊಬ್ಬರಿಗೆ ಹರಡಬಲ್ಲದು.
- ಟಿಬಿಯಿಂದ ಸಾವಾಗುವ ಸಾಧ್ಯತೆ ಹೆಚ್ಚುತ್ತದೆ.
- ನಿಯಮಬದ್ಧವಿಲ್ಲದ ಚಿಕಿತ್ಸೆ ಮಾಡಿದರೆ ರೋಗಾಣುಗಳು ಟಿಬಿ ಔಷಧಿಗೆ ಪ್ರತಿರೋಧಕ ಶಕ್ತಿ ಬೆಳೆಸಿಕೊಳ್ಳುತ್ತವೆ.



## ಕೆಮ್ಮುವಾಗ ವಹಿಸಬೇಕಾದ ಕಾಳಜಿ



- ಕರವಸ್ತ್ರದಿಂದ/ಕಾಗದದಿಂದ ಬಾಯಿ ಮೂಗನ್ನು ಮುಚ್ಚಿಕೊಳ್ಳಿ.
- ಕರವಸ್ತ್ರ ಇಲ್ಲದಿದ್ದಲ್ಲಿ ಮೊಣಕೈ ಬಳಸಿ. ಅಂಗೈ ಬೇಡ.
- ಪದೇ ಪದೇ ಕೆಮ್ಮು ಇದ್ದಲ್ಲಿ ಮಾಸ್ಕ್ ಬಳಸಿ.
- ಆಗಾಗ ಕೈ ತೊಳೆಯಬೇಕು. ಸಾಬೂನು ಬಳಸಿದರೆ ಉತ್ತಮ.
- ಎಲ್ಲೆಂದರಲ್ಲಿ ಕಫ ಉಗುಳಬಾರದು.

## ಟಿಬಿ ಮತ್ತು ಪೌಷ್ಟಿಕ ಆಹಾರ

- ಪೌಷ್ಟಿಕವಾದ ಮತ್ತು ಪ್ರೋಟಿನ್‌ಯುಕ್ತ ಆಹಾರವನ್ನು ಸೇವಿಸಿ.
- ಆಹಾರದಿಂದಾಗಿ ತೂಕ ಹೆಚ್ಚಾಗುತ್ತದೆ, ಅಡ್ಡಪರಿಣಾಮಗಳು ಕಡಿಮೆಯಾಗುತ್ತವೆ. ಹಾಗೂ ಆರೋಗ್ಯವಾಗಿರುವ ಭಾವನೆ ಮೂಡುತ್ತದೆ.



- ಟಿಬಿ ಖಾಯಿಲೆ ಮಾತ್ರ ಇರುವವರಿಗೆ ಆಹಾರದ ಕಟ್ಟುನಿಟ್ಟಿಲ್ಲ.
- ಚೆನ್ನಾಗಿ ತಿನ್ನಿ, ಚೆನ್ನಾಗಿ ಬದುಕಿ.
- ಟಿ.ಬಿ ಚಿಕಿತ್ಸೆ ಪಡೆಯುತ್ತಿರುವ ಎಲ್ಲಾ ರೋಗಿಗಳಿಗೂ ಪೌಷ್ಠಿಕ ಆಹಾರ ಸೇವನೆಗೆ ಸಹಾಯವಾಗಲು ಚಿಕಿತ್ಸೆ ಅವಧಿಯಲ್ಲಿ ಪ್ರತಿ ತಿಂಗಳೂ ಸರ್ಕಾರದ ವತಿಯಿಂದ ರೂ. 500/– ಸಹಾಯಧನ ಕೊಡಲಾಗುವುದು.

## ತಂಬಾಕು ಸೇವನೆ, ಮದ್ಯಪಾನ ಮತ್ತು ಟಿಬಿ



- ಟಿಬಿ ರೋಗಾಣುಗಳಿಂದಾಗಿ ಶ್ವಾಸಕೋಶಗಳು ಈಗಾಗಲೇ ದುರ್ಬಲವಾಗಿರುತ್ತವೆ. ಟಿಬಿ ರೋಗ ಇರುವವರಿಗೆ, ತಂಬಾಕು ಸೇವನೆ ಹಾನಿಕರ.



- ನಿಯತವಾಗಿ ಮಾತ್ರೆ ತೆಗೆದುಕೊಳ್ಳುವುದನ್ನು ಮದ್ಯಪಾನ ತಪ್ಪಿಸುತ್ತದೆ.
- ಟಿಬಿಗೆ ಔಷಧಿಗಳನ್ನು ತೆಗೆದುಕೊಳ್ಳುವಾಗ ಮತ್ತು ಚಿಕಿತ್ಸೆ ಪೂರ್ಣವಾದ ಬಳಿಕವೂ ಸಹ ಮಧ್ಯಪಾನ ಮಾಡದಿರುವುದು ಅವಶ್ಯಕ.

*Disclaimer: This brief is made possible by the generous support of the American people through the United States Agency for International Development (USAID). The contents are the responsibility of KHPT and do not necessarily reflect the views of USAID or the United States Government.*